

ಸ್ಪರ್ಶಿಸಿದೆ. ಅವೂ ಕೂಡಾ ಯೂರೋಪಿಯನ್ ಮಹಿಳೆಯ ಕೂದಲಿನ ಹಾಗೆಯೇ ಇದ್ದವು. ನಾನು ಹಾಸಿಗೆಯಿಂದ ಪುಟಿದು ಇಳಿಯುತ್ತ 'ಯಾರು ನೀನು?' ಎಂದು ಕೂಗಿದೆ. ನನ್ನ ತಲೆ ಬ್ಯಾರೆಲ್ಲಿನ ತರಹ ಊದಿಕೊಂಡಂತೆ ಕಾಣಿಸಿತು. ನಾನು ಗಡಗಡ ನಡುಗುತ್ತಿದ್ದೆ. ಆ ಮಹಿಳೆ ಎದ್ದು ಕುಳಿತು ಈ ಹಾಸಿಗೆಯ ಕಡೆಗೆ ಬಾ ಎಂದು ಕರೆಯುವಂತೆ ನನ್ನ ಕಡೆಗೆ ಕೈ ಚಾಚಿದಳು. ಅವಳು ಹಾಗೆ ಕೈಚಾಚಿದಾಗ ಅವಳ ಬೆರಳುಗಳು ನನ್ನನ್ನು ತಾಗಿದವು. ನಾನು ನೆಗೆದು ಹಿಂದಕ್ಕೆ ಸರಿಯುತ್ತ 'ಯಾರು ನೀನು? ನಿನ್ನ ಹೆಸರೇನು?' ಎಂದು ಚೀರಿದೆ. ನನ್ನಂತಹ ನಾನು ಮಹಿಳೆಗೆ ಅಂಜುವುದೆಂದರೇನು? ಅವಳು ಬಿಳಿಯಳೇ ಆಗಿರಲಿ, ಕರಿಯಳೇ ಆಗಿರಲಿ, ಅವರ ಬೆಲೆ ಹತ್ತಿಪ್ಪತ್ತು ಪೆನ್ಸ್ ಅಷ್ಟೇ ಅಲ್ಲವೇ? 'ಹೀಗಾ? ನೀನು ಬಾಯಿ ತೆರೆಯುವಂತೆ ಮಾಡುತ್ತೇನೆ' ಎಂದು ಹೇಳುತ್ತ ಟೇಬಲ್ ಮೇಲಿರುವ ಕಡ್ಡಿಪೆಟ್ಟಿಗೆಯನ್ನು ಹುಡುಕಾಡಿದೆ. ನಾನು ದೀಪ ಹಚ್ಚಲಿದ್ದೇನೆ ಎಂದು ಆ ಮಹಿಳೆಗೆ ಸಂಶಯ ಬಂದಿತು. 'ದಯವಿಟ್ಟು ದೀಪ ಹಚ್ಚಬೇಡ' ಎಂದು ಇಗ್ಬೊ ಭಾಷೆಯಲ್ಲಿ ಹೇಳಿದಳು.

'ಹಾಗಾದರೆ, ನೀನು ಬಿಳಿಯ ಮಹಿಳೆ ಅಲ್ಲವೆಂದಾಯಿತು? ಯಾರು ನೀನು? ನೀನು ಯಾರೆಂದು ಹೇಳದಿದ್ದರೆ ನಾನು ದೀಪ ಹಚ್ಚಿಯೇ ಬಿಡುತ್ತೇನೆ. ಕಡ್ಡಿಪೆಟ್ಟಿಗೆಯನ್ನು ಅಲ್ಲಾಡಿಸುತ್ತ ಹೇಳಿದೆ. ನನ್ನಲ್ಲಿ ಧೈರ್ಯ ಮರುಕಳಿಸಿ ಬಂದಿತ್ತು. ನಾನು ಆ ಧ್ವನಿಯನ್ನು ನೆನಪಿಸಿಕೊಳ್ಳಲು ಪ್ರಯತ್ನಿಸಿದೆ. ನನಗೆ ಆ ಧ್ವನಿ ತುಂಬಾ ಪರಿಚಯದ್ದು ಎಂದು ನೆನಪಿಗೆ ಬಂದಿತು.

'ಮರಳಿ ಈ ಹಾಸಿಗೆಯೊಳಗೆ ನುಸುಳು ಬಾ. ನಾನು ನಿನಗೆ ಎಲ್ಲವನ್ನೂ ಹೇಳುತ್ತೇನೆ' – ಅವಳ ಈ ಮಾತುಗಳು ನನಗೆ ಅನಂತರ ಕೇಳಿಸಿದವು. ನಾನು ಈ ಮೊದಲು ಕೇಳಿಸಿಕೊಂಡದ್ದು ನನಗೆ ಪರಿಚಿತವಾದ ಧ್ವನಿ ಎಂದು ನಾನು ಏಕೆ ಭಾವಿಸಿದ್ದೇನೆಯೋ ಅದೆಲ್ಲ ಹುಸಿಯಾಗಿತ್ತು. ಆ ಧ್ವನಿ ಸಕ್ಕರೆಯ ಹಾಗೆ ಮಧುರವಾಗಿತ್ತು. ಆದರೆ ಪರಿಚಿತವಾದುದಾಗಿರಲಿಲ್ಲ. ಹಾಗಾಗಿ ನಾನು ಕಡ್ಡಿಯನ್ನು ಗೀರಿಯೇ ಬಿಟ್ಟೆ.

'ಕೈ ಮುಗಿಯುವೆ, ಕಡ್ಡಿ ಗೀರಬೇಡ' ಎನ್ನುವ ಮಾತುಗಳೇ ಅವಳು ಹೇಳಿದ ಕೊನೆಯ ಮಾತಾಗಿದ್ದವು.

ನಂತರ ನಾನೇನು ಮಾಡಿದೆ? ಆ ಮನೆಯಿಂದ ಹೊರಗೆ ಹೇಗೆ ಬಂದೆ? ಎನ್ನುವುದು ನಿಮ್ಮ ಊಹೆಗೆ ಬಿಟ್ಟ ಮಾತು. ನನಗೆ ನೆನಪಿರುವಂತೆ ನಾನು ಅಲ್ಲಿಂದ ಹುಚ್ಚನಂತೆ ಮ್ಯಾಥ್ಯೂನ ಮನೆಯ ಕಡೆಗೆ ಓಡಿ ಬಂದೆ. ನಾನು ನನ್ನ ಎರಡೂ ಕೈಗಳಿಂದ ಅವನ ಮನೆಯ ಬಾಗಿಲನ್ನು ತಟ್ಟುತ್ತಿದ್ದೆ.

'ಯಾರದು?' ಒಳಗಿನಿಂದ ಧ್ವನಿ ಬಂದಿತು.

'ಕೈಲಾಸದಲ್ಲಿರುವ ದಯಾಘನನೇ! ಬಾಗಿಲನ್ನು ತೆರೆ,' ನಾನು ಚೀರಿದೆ.

ನಾನು ನನ್ನ ಹೆಸರನ್ನು ಹೇಳಿದೆ. ಆದರೆ ಆಗಿನ ನನ್ನ ಧ್ವನಿ ನನ್ನ ಧ್ವನಿಯಂತಿರಲಿಲ್ಲ. ಒಂದಿಷ್ಟೇ ಬಾಗಿಲು ತೆರೆಯಿತು. ನನ್ನ ಬಂಧುವು ತನ್ನ ಬಲಗೈಯಲ್ಲಿ ಮಚ್ಚನ್ನು ಹಿಡಿದಿದ್ದ.

ನಾನು ಅಲ್ಲಿಯೇ ನೆಲದ ಮೇಲೆ ಕುಸಿದು ಬಿದ್ದೆ. 'ದೇವರ ದಯೆಯಿಂದ ಹಾಗಾಗಲು ಸಾಧ್ಯವಿಲ್ಲ,' ಅವನು ಹೇಳಿದ.

ಸ್ವತಃ ದೇವರೇ ನನ್ನನ್ನು ಮ್ಯಾಥ್ಯೂ ಇಬೊನ ಮನೆಗೆ ಹೋಗುವಂತೆ ನಿರ್ದೇಶಿಸಿರಬಹುದು. ನಾನು ಎಲ್ಲಿಗೆ ಹೊರಟಿದ್ದೇನೆ ಎಂದು ನನಗೇ ಗೊತ್ತಿರಲಿಲ್ಲ. ನಾನು ಇನ್ನೂ ಜೀವಂತವಾಗಿರುವೆನೋ ಅಥವಾ ಸತ್ತೇ ಹೋಗಿರುವೆನೋ ನನಗೆ ಹೇಳಲು ಸಾಧ್ಯವಿರಲಿಲ್ಲ. ಮ್ಯಾಥ್ಯೂ ನನ್ನ ಮೇಲೆ ತಣ್ಣೀರು ಸುರುವಿದ. ಅದಾದ ಸ್ವಲ್ಪ ಹೊತ್ತಿನ ನಂತರವಷ್ಟೆ ಏನು ನಡೆಯಿತು ಎಂದು ನಾನು ಅವನಿಗೆ ಹೇಳಲು ಸಾಧ್ಯವಾಯಿತು. ನಾನು ಅಲ್ಲಿ ನಡೆದುದನ್ನು ತಿರುವುಮುರುವಾಗಿ ಹೇಳಿದೆನೆಂದು ತೋರುತ್ತದೆ. ಹೀಗಾಗಿ ಎಲ್ಲವೂ ಗೋಜಲಾಗಿ ಅವನು ಮೇಲಿಂದ ಮೇಲೆ ಅವಳು ಹೇಗೆ ಇದ್ದಳು? ಎಂದು ಕೇಳಿಯೇ ಕೇಳಿದ.

'ನಾನು ಅವಳನ್ನು ನೋಡಿಲ್ಲವೆಂದು ಈ ಮೊದಲೇ ಹೇಳಿರುವೆ,' ನಾನು ಹೇಳಿದೆ.

'ಓ ಹಾಗಾ? ಅವಳ ಧ್ವನಿಯನ್ನಂತೂ ಕೇಳಿರುವಿಯಲ್ಲ?'

'ಹೌದು, ನಾನು ಅವಳ ಧ್ವನಿಯನ್ನು ಪಕ್ಕಾ ಕೇಳಿಸಿಕೊಂಡಿರುವೆ. ನಾನು ಅವಳನ್ನು ಮುಟ್ಟಿರುವೆ. ಅವಳೂ ನನ್ನನ್ನು ಮುಟ್ಟಿರುವಳು.'

'ನೀನು ಅವಳನ್ನು ಸರಿಯಾಗಿ ಬೆದರಿಸಿದೆಯೋ ಇಲ್ಲವೋ ನನಗೆ ಗೊತ್ತಾಗುತ್ತಿಲ್ಲ,' ಮ್ಯಾಥ್ಯೂ ಹೇಳಿದ.

ಹೇಗೆ ವಿವರಿಸಬೇಕೆಂದು ನನಗೆ ತಿಳಿಯಲಿಲ್ಲ. ಆದರೆ ಮ್ಯಾಥ್ಯೂ ಹೇಳಿದ ಆ ಮಾತುಗಳು ನನ್ನ ಕಣ್ಣನ್ನು ತೆರೆಯಿಸಿದವು. ಅವನ ಮಾತುಗಳಿಂದ ನನ್ನ ಮನೆಗೆ ಮಾಮಿ ವೊಟಾ ಬಂದಿದ್ದಳೆಂದು ತಿಳಿದು ಬಂತು. ನನ್ನ ಮನೆಗೆ ಬಂದವಳು ಅವಳು ನಿಗರ್ ನದಿಯ ಕನ್ಯೆಯಾಗಿದ್ದಳು.

'ಈ ಬದುಕಿನಲ್ಲಿ ನಿನಗೆ ಏನು ಬೇಕು ಎನ್ನುವುದರ ಮೇಲೆ ಅದೆಲ್ಲ ನಿರ್ಧರಿತವಾಗುತ್ತದೆ. ನಿನಗೆ ಸಿರಿಸಂಪತ್ತು ಬೇಕು ಎಂದು ನಿರ್ಣಯಿಸಿದ್ದರೆ ನಿನ್ನಿಂದ ದೊಡ್ಡ ಪ್ರಮಾದವಾಗಿದೆ ಎಂದು ಅರ್ಥ. ನೀನು ನಿನ್ನ ತಂದೆಯ ನಿಜವಾದ ಮಗನಾಗಿದ್ದರೆ ನನ್ನ ಕೈಯನ್ನು ಹಿಡಿ,' ಮ್ಯಾಥ್ಯೂ ಮತ್ತೆ ಹೇಳಿದ.

ನಾವು ಕೈ ಕುಲುಕಿದೆವು. 'ಹೆಂಡಿರು ಮತ್ತು ಮಕ್ಕಳ ಬದಲಿಗೆ ನಾವು ಸಂಪತ್ತನ್ನು ಆಯ್ಕೆ ಮಾಡದಂತೆ ನಮ್ಮ ಪಾಲಕರು ನಮಗೆ ಹೇಳಿದ್ದಾರೆ.'

ಈಗ ನನ್ನ ಮಡದಿಯರು ನನಗೇನಾದರೂ ಕಿರಿಕಿರಿ ಮಾಡಿದರೆ, 'ನಿಮ್ಮನ್ನು ಬೈಯುವುದರಲ್ಲಿ ಯಾವ ಅರ್ಥವೂ ಇಲ್ಲ. ಅಂದು, ನಾನೊಂದು ವೇಳೆ ಬುದ್ಧಿವಂತನಾಗಿದ್ದರೆ ನಾನು ಮಾಮಿ ವೊಟಾಳನ್ನು ಆಯ್ಕೆ ಮಾಡಿಕೊಂಡಿರುತ್ತಿದ್ದೆ' ಅನ್ನುತ್ತೇನೆ.

'ಮಾಮಿ ವೊಟಾಳನ್ನು ಏಕೆ ಆಯ್ಕೆ ಮಾಡಿಕೊಳ್ಳಲಿಲ್ಲ' ಎಂದು ಅವರು ನಗು ನಗುತ್ತ ನನ್ನನ್ನು ಪ್ರಶ್ನಿಸುತ್ತಾರೆ.

'ನೀನೇನು ಚಿಂತಿಸಬೇಡ ಅಪ್ಪಾಜಿ. ಅವಳು ಇನ್ನೊಮ್ಮೆ ಬರುತ್ತಾಳೆ. ಅವಳು ಖಂಡಿತವಾಗಿ ನಾಳೆಯೇ ಬರುತ್ತಾಳೆ,' ನನ್ನ ಚಿಕ್ಕ ಮಗ ಹೇಳುತ್ತಾನೆ.

ಆದರೆ, ಇದೆಲ್ಲ ಹುಡುಗಾಟಿಕೆ ಎಂದು ಅಲ್ಲಿರುವ ನಮಗೆಲ್ಲ ಗೊತ್ತು. ಮಕ್ಕಳ ಬದಲಿಗೆ ಸಂಪತ್ತನ್ನು ಆಯ್ಕೆ ಮಾಡಿಕೊಳ್ಳುವವರು ಯಾರಿದ್ದಾರೆ? ಡಾ. ಜೆ.ಎಂ. ಸ್ಟುವರ್ಟ್ ಯಂಗ್‌ನನ್ನು ಹೊರತುಪಡಿಸಿ ಮತ್ತಾರು ಅಂತಹ ಆಯ್ಕೆಯನ್ನು ಮಾಡಲು ಸಾಧ್ಯ? ಓ, ನಿಮಗೆ ಹೇಳುವುದನ್ನು ನಾನು ಮರೆತೇಬಿಟ್ಟಿದ್ದೆ. ನಾನು ಮಾಮಿ ವೊಟಾಳನ್ನು ಹೊರಗಟ್ಟಿದ ದಿವಸವೇ ಅವಳು ಆ ಬಿಳಿಯ ವ್ಯಾಪಾರಸ್ಥ ಡಾ. ಜೆ.ಎಂ. ಸ್ಟುವರ್ಟ್ ಯಂಗ್‌ನ ಬಳಿಗೆ ಹೋಗಿ ಅವನ ಪ್ರೇಯಸಿಯಾಗಿಬಿಟ್ಟಳು. ನೀವೆಲ್ಲ ಅವನ ಬಗೆಗೆ ಕೇಳಿರುವಿರಿ ತಾನೆ? ಓ! ಅವನು ನಮ್ಮ ದೇಶದಲ್ಲಿಯೇ ಆಗರ್ಭ ಶ್ರೀಮಂತ ವ್ಯಕ್ತಿ. ಆದರೆ ಅವನು ಮದುವೆಯಾಗದಂತೆ ಮಾಮಿ ವೊಟಾ ನೋಡಿಕೊಂಡಳು. ಅವನು ತೀರಿಕೊಂಡಾದ ನಂತರ ಏನಾಯಿತು ಗೊತ್ತಾ? ಅವನ ಸಿರಿ ಸಂಪತ್ತೆಲ್ಲ ಹೊರಗಿನವರ ಪಾಲಾಯಿತು. ದೇವರ ದಯೆಯಿಂದ ಹೀಗಾಗಬಾರದಿತ್ತು. ನೀವೇ ಹೇಳೀ, ಸಿರಿಸಂಪತ್ತು ನಿಜವಾಗಿಯೂ ಮಂಗಳಕರವೇ? ಓ ದೇವರೆ, ನಾವು ಅಂತಹ ಆಯ್ಕೆಯನ್ನು ಮಾಡದಂತೆ ನಮ್ಮನ್ನು ರಕ್ಷಿಸು.

ಟಿಪ್ಪಣಿಗಳು:

**1 salt water girl** = ಸ್ಥಳೀಯ ಹುಡುಗಿಯರ ಕುರಿತಾಗಿ ಬಳಕೆಯಾಗುವ ಲೈಂಗಿಕಸೂಚಕ ಪದ

**2** ಮಾಮಿ ವೊಟಾ: ಮತ್ಸ್ಯಕನ್ಯೆಯ ಹಾಗೆ ಕಾಣಿಸುವ ಚೆಲುವಾದ ಸ್ತ್ರೀ ದೇವತೆ. ಆಫ್ರಿಕಾ ದೇಶದ ಜನರ ನಂಬಿಕೆಯ ಪ್ರಕಾರ ಅವಳೊಬ್ಬ ಜಲದೇವತೆ. ಅವಳು ಸಿರಿಸಂಪತ್ತನ್ನು ನೀಡುವ ದೇವತೆ. ಈ ಅರ್ಥದಲ್ಲಿ ಅವಳು ಬಂಡವಾಳಶಾಹಿಗಳ ದೇವತೆ. ಅವಳ ಸುತ್ತಲೂ ಚಿತ್ರಕಲೆಯ ದೊಡ್ಡ ಜಾಲವೇ ಹೆಣೆದುಕೊಂಡಿದೆ. ಅವಳನ್ನು ಅನೇಕ ವಿನ್ಯಾಸಗಳಲ್ಲಿ ಕಲಾವಿದರು ರೇಖಿಸಿದ್ದಾರೆ.

**ಪ್ರತಿಕ್ರಿಯಿಸಿ: feedback@sudha.co.in**